# ಹೊಸತು

## ಅರ್ಜಾ ಎನರ್ಜಿ ಡ್ರಿಂಕ್

ಬಿಸ್ಲೆರಿ ಸಂಸ್ಥೆಯು ಅರ್ಜಾ–ದಿ ಲಿಕ್ವಿಡ್ ಚಾರ್ಜರ್ ಎನರ್ಜಿ ಡ್ರಿಂಕ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಇದು ವಿಟಮಿನ್ ಸಮೃದ್ಧವಾದ ಪೇಯವಾಗಿದ್ದು, ಮೈ–ಮನಸ್ಸಿಗೆ ನವ ಚೈತನ್ಯ ನೀಡುತ್ತದೆ ಎಂದು ಕಂಪೆನಿ ಹೇಳಿದೆ. ಎಲ್ಲ ವಯೋಮಾನದವರಿಗಾಗಿ ಈ ಡ್ರಿಂಕ್ ಆಗಿದ್ದು, 250 ಎಮ್‌ಎಲ್ ಟಿನ್ ಮತ್ತು 300 ಎಮ್‌ಎಲ್ ಬಾಟಲಿಗಳಲ್ಲಿ ಲಭ್ಯ.

ಬೆಲೆ 50 ರೂಪಾಯಿ.

ಮಾಹಿತಿಗೆ : 8971498865






## ಆ್ಯಪಲ್ ಐಮ್ಯಾಕ್ ರೆಟಿನಾ

ಆ್ಯಪಲ್ ಆಲ್ ಇನ್ ಒನ್ ಮ್ಯಾಕ್ ಡೆಸ್ಕ್‌ಟಾಪ್ ಸರಣಿಯಲ್ಲಿ ರೆಟಿನಾ ಡಿಸ್‌ಪ್ಲೇ ಹೊಂದಿರುವ ಐಮ್ಯಾಕ್ ಬಿಡುಗಡೆಯಾಗಿದೆ. ಎಚ್‌ಡಿ ಗುಣಮಟ್ಟಕ್ಕಿಂತ ಏಳು ಪಟ್ಟು ಅಧಿಕ ಸ್ಪಷ್ಟತೆ ಇದರ ವಿಶೇಷ. 8 ಜಿಬಿ ರ‍್ಯಾಮ್ ಮತ್ತು 2 ಜಿಬಿ ಗ್ರಾಫಿಕ್ಸ್ ಕಾರ್ಡ್ ಹೊಂದಿರುವ ಐಮ್ಯಾಕ್ ಅತ್ಯಂತ ಸ್ಪಷ್ಟ ಮತ್ತು ಕಾರ್ಯದಕ್ಷತೆಗೆ ಹೆಸರುವಾಸಿ.

ರೆಟಿನಾ ಐಮ್ಯಾಕ್ 27 ಇಂಚಿನ ಪರದೆ ಹೊಂದಿದ್ದು, ಎಕ್ಸ್ ಯೊಸೆಮೈಟ್ ಆಪರೇಟಿಂಗ್ ಸಿಸ್ಟಮ್ ಇದರಲ್ಲಿದೆ.

ಬೆಲೆ 1,79,000 ರೂಪಾಯಿ.

ವಿವರಗಳಿಗೆ : www.apple.com/mac

## ಲೋಟಸ್ ನೇಲ್ ಪಾಲಿಶ್




ಉಗುರಿನ ಅಂದವನ್ನು ಹೆಚ್ಚಿಸಲು ಲೋಟಸ್ ಮೇಕಪ್ ಎಕೊಸ್ಟೇ ನೇಲ್ ಎನಾಮೆಲ್ ಹೊರತಂದಿದೆ. ಶೇಕಡ 100ರಷ್ಟು ಸಸ್ಯಜನ್ಯ ಉತ್ಪನ್ನ ಇದಾಗಿದ್ದು, ದೀರ್ಘ ಬಾಳಿಕೆ ಬರುತ್ತದೆ. 24 ಆಕರ್ಷಕ ಬಣ್ಣಗಳಲ್ಲಿ ಇದು ಲಭ್ಯವಿದ್ದು, ಉಗುರಿನ ಆರೋಗ್ಯಕ್ಕೆ ಉತ್ತಮ ಎಂದು ಲೋಟಸ್ ಹೇಳಿದೆ.

ಬೆಲೆ 249 ರೂಪಾಯಿ.

ವಿವರಗಳಿಗೆ: 9342483454





## ಫೋರ್‌ಸೆವೆನ್‌ನಿಂದ ವಧುವಿನ ಆಭರಣ

ಫೋರ್‌ಸೆವೆನ್ ವಧುವಿನ ಸಿಂಗಾರಕ್ಕಾಗಿ ವಿಶೇಷವಾದ ಆಭರಣ ಶ್ರೇಣಿಯನ್ನು ಪರಿಚಯಿಸಿದೆ. ನೆಕ್ಲೆಸ್‌ಗಳು, ಬ್ರೇಸ್‌ಲೆಟ್, ಕಿವಿಯೋಲೆ, ಸೊಂಟಪಟ್ಟಿ ಇನ್ನಿತರ ವಿವಿಧ ಆಭರಣ ಈ ಸಂಗ್ರಹದಲ್ಲಿದೆ.

ಬೆಳ್ಳಿ ಮತ್ತು ಹರಳುಕಲ್ಲಿನ ಆಯ್ಕೆ ಕೂಡಾ ಲಭ್ಯವಿದ್ದು, ಮದುವೆಯ ಸಂದರ್ಭಕ್ಕೆ ಧರಿಸಲು ಅನುಗುಣವಾಗುವಂತೆ ರೂಪಿಸಲಾಗಿದೆ. ಈ ಆಭರಣಗಳು ಶುದ್ಧತೆ ಮತ್ತು ಗುಣಮಟ್ಟಕ್ಕೆ ಹೆಸರುವಾಸಿ ಎಂದು ಫೋರ್‌ಸೆವೆನ್ ಹೇಳಿದೆ.

ಬೆಲೆ 550–22,000 ರೂಪಾಯಿ

ಮಾಹಿತಿಗೆ : 8867622411

## ಮಹಾರಾಜ ವೈಟ್‌ಲೈನ್

ಮಹಾರಾಜ ವೈಟ್‌ಲೈನ್ ಇದೀಗ ಹೊಸ ವಿನ್ಯಾಸ ಮತ್ತು ಗುಣಮಟ್ಟದೊಂದಿಗೆ ಗೃಹೋಪಯೋಗಿ ಉತ್ಪನ್ನಗಳನ್ನು ಹೊರತಂದಿದೆ. ಮಹಾರಾಜ ಕೂಲ್‌ಟಚ್ ಮಲ್ಟಿಕುಕರ್ ಬಳಸಲು ಸರಳವಾದ ಕುಕ್ಕರ್ ಆಗಿದ್ದು, ಅನ್ನ, ನೂಡಲ್ಸ್, ಪೋಹಾ, ಸೂಪ್ ತಯಾರಿಸಲು ತುಂಬ ಅನುಕೂಲಕರ.

ಬೆಲೆ 2,999 ರೂಪಾಯಿ.

ಮಾಹಿತಿಗೆ: 09810105771




## ನೋಕಿಯ ಲೂಮಿಯ 830



ಮೈಕ್ರೊಸಾಫ್ಟ್ ನೋಕಿಯ ಇದೀಗ ಲೂಮಿಯ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಲೂಮಿಯ 830 ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. 1 ಜಿಬಿ ರ‍್ಯಾಮ್, 16 ಜಿಬಿ ಮೆಮೊರಿ ಹೊಂದಿದೆ. 10 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು 1 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮರಾ ಇದೆ. ಎಚ್‌ಡಿ ಗುಣಮಟ್ಟದ ವೀಡಿಯೊ ಇದರ ವಿಶೇಷ. ನ್ಯಾನೋ ಸಿಮ್ ಬಳಸಬಹುದು.

ಬೆಲೆ 28,799 ರೂಪಾಯಿ. www.microsoft.com/lumia